ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 28-30
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಡಾ. ಪಾಟೀಲರ ಕಾವ್ಯದಲ್ಲಿ ವ್ಯಕ್ತಿ ಚಿತ್ರಣ ವಿಶಿಷ್ಟ ನೋಟ

**ಡಾ. ನಾಗೇಂದ್ರಪ್ಪ ಶಿವಶರಣಪ್ಪ**
ಕನ್ನಡ ಅಥಿತಿ ಉಪನ್ಯಾಸಕರು, ಕನ್ನಡ ಅಧ್ಯಯ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

***Abstract:***
*ಕನ್ನಡ ಆಧುನಿಕ ಕಾವ್ಯ ಪರಂಪರೆ ವಿಶಿಷ್ಟವಾದದ್ದು. ತಿರುಳ್ಗನ್ನಡ ನಾಡೆಂದು ಪ್ರಖ್ಯಾತವಾದ ಕೊಪ್ಪಳ ಪ್ರಾಚೀನ ಶಿಲಾಯುಗದಿಂದ ಇಂದಿನವರೆಗೂ ಕನ್ನಡ ಇತಿಹಾಸವನ್ನೊಳಗೊಂಡಂತೆ ಸಾಹಿತ್ಯಿಕವಾಗಿ, ಕಾವ್ಯ ಪರಂಪರೆಗೆ ಹೊಸದಾದ ಕೊಡುಗೆ ನೀಡಿದೆ. ಶಾಸನಕವಿ ಸಮಗಾರ ಚಂದ, ಅತ್ತಿಮಬ್ಬೆ, ರನ್ನ, ಜನಪದ ಕವಿಗಳು, ಶರಣರು, ದಾಸರು ಪುರಾಣ ಕವಿಗಳು, ತತ್ವಪದಕಾರರು, ಅನುಭಾವಿ ಕವಿಗಳು ಜನಿಸಿ ಕಾವ್ಯದ ಸಮೃದ್ಧಿಯನ್ನು ಕೊಟ್ಟಂತೆ ಆಧುನಿಕವಾಗಿಯೂ ಡಾ.ಸಿದ್ಧಯ್ಯ ಪುರಾಣಿಕ, ಡಾ.ಪಂಚಾಕ್ಷರಿ ಹಿರೇಮಠ, ರಂ.ರಾ ನಿಡಗುಂದಿ, ನಿಂಗೋಜಿ, ಕೆ.ಬಿ.ಬ್ಯಾಳಿ, ಅಲ್ಲಮಪ್ರಭು ಬೆಟ್ಟದೂರು ಹೀಗೆ ಹಲವರು ಆಯಾ ಕಾಲದಲ್ಲಿ ಕಾವ್ಯ ರಚಿಸುತ್ತಾ ಬಂದಿದ್ದಾರೆ. ಅವರ ಸಾಲಿನಲ್ಲಿ ಡಾ.ಗವಿಸಿದ್ಧಪ್ಪ ಪಾಟೀಲ ಒಬ್ಬರು. ಇವರು ಈಗಾಗಲೇ ಕನಸುಗಣ್ಣಿನ ಹುಡುಗಿ, ಕಾವ್ಯ ಭಜ್ಜಿ, ಬೆಳ್ಳಕ್ಕಿ ದಾರಿ ಈ ಮೂರು ಸಂಕಲನದ ಜೊತೆಗೆ ಹಾಯಿಕು, ಗಜಲ್, ರುಬಾಯಿ, ಆಧುನಿಕ ವಚನ, ಚುಟುಕು, ಮುಕ್ತಕ, ಶಾಹಿರಿ, ದೋಹೆ, ಸಾನೆಟ್ ಹೀಗೆ ಹಲವು ಪ್ರಕಾರದಲ್ಲಿ ಕೃಷಿಗೈದು ಹತ್ತು ಕವನ ಸಂಕಲನ, ಸಹಜ ಕಾವ್ಯ ಆಯ್ದ ಕವನ ಸಂಕಲನ ಪ್ರಕಟವಾಗಿವೆ.*

***Keywords:*** *ಕನ್ನಡ ಸಾಹಿತ್ಯ, ಡಾ. ಪಾಟೀಲ, ವ್ಯಕ್ತಿ ಚಿತ್ರಣ*

## ಪೀಠಿಕೆ

ಸೃಜನಶೀಲ ಸಂವೇದನಾಶೀಲ ಕವಿ ಡಾ. ಪಾಟೀಲರು ಸಾಹಿತ್ಯದ ಹಲವು ಪ್ರಕಾರಗಳಾದ ಗದ್ಯ-ಪದ್ಯ ಸಂಪಾದನೆಗಳು ಸೇರಿ ತೊಂಬತ್ತಕ್ಕೂ ಹೆಚ್ಚು ಕೃತಿ ಪ್ರಕಟಿಸಿದ್ದಾರೆ. ವರ್ತಮಾನದ ತಳಮಳ ತಲ್ಲಣಗಳನ್ನು ಮನುಷ್ಯನ ಮನಸ್ಸು ಅರಳಿಸಬೇಕು, ಪ್ರೀತಿ ಪ್ರೇಮ ವಿರಹ, ಪ್ರಕೃತಿ ಸಹಜವಾದ ಕಾವ್ಯ ಅವರಲ್ಲಿವೆ. ಹಾಗೆ ಸಾಮಾಜಿಕ ಕಳಕಳಿಯು ಇದೆ. ವೈಚಾರಿಕ ಚಿಂತನೆಗೆ ಹಲವಾರು ಬಗೆ ವಸ್ತು ವಿಷಯ ಹೊಂದಲಾಗಿದೆ. ಅದರಂತೆ ಮಹಾತ್ಮರು ಶರಣರು, ಪುಣ್ಯಪುರುಷರು, ಸಾಮಾಜಿಕ ಪರಿವರ್ತನೆಯ ಹರಿಕಾರರ ಕುರಿತು ಬೇರೆ ಬೇರೆ ನೆಲೆಯಲ್ಲಿ ಕಾವ್ಯವನ್ನು ರಚಿಸಿದ್ದು ಇಲ್ಲಿ ಗಮನಾರ್ಹವಾಗಿದೆ. ಬುದ್ಧ, ಬಸವ, ಕನಕ, ಅಂಬೇಡ್ಕರ ಅವರ ಕುರಿತಾದ ಹಲವಾರು ಕವನಗಳು ಅವರ ಚಿಂತನೆಗಳ ಮೇಲೆ ಬೆಳಕು ಕಾಣುತ್ತವೆ.

***ನಿಮ್ಮ ಧ್ಯಾನಸ್ಥ ಮುಖ ನನಗೆ***
***ತಾಯ್ತನದ ಕರುಳು ಬಳ್ಳಿ (ಗೌತಮ)***

***ನೀ ಬರಬೇಡ ಬಸವಣ್ಣ***
***ಗುಂಡು ಹೊಡೆಯುತ್ತಾರೆ***
***ನೀನು ಬರಲೇಬೇಡ ಬಸವಣ್ಣ (ಬಸವ)***

***Please cite this article as:*** ನಾಗೇಂದ್ರಪ್ಪ ಶಿವಶರಣಪ್ಪ. (2026). ಡಾ. ಪಾಟೀಲರ ಕಾವ್ಯದಲ್ಲಿ ವ್ಯಕ್ತಿ ಚಿತ್ರಣ ವಿಶಿಷ್ಟ ನೋಟ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 5(3), 28–30

***ಬಯಲಲ್ಲಿ ಬಯಲಾಗಿ***

***ಕನಕ ಬೆಳಗಿನೊಳಗಣ ಬೆಳಗಾನಿಂತ (ಕನಕ)***

ಎಂದು ಕರೆದ ಅವರ ಕಾವ್ಯದ ರೀತಿ ಇಲ್ಲಿ ಅನನ್ಯವಾಗಿದೆ. ಅಂಬೇಡ್ಕರ್ ಬಗೆಗಂತು ಮಹಾಬೋಧಿ, ಸಮತೆಯ ಶಿಲ್ಪಿ, ನಮೋ ಬುದ್ಧ, ಮನುಜ ಸಾಧಕ ನೀನೆ ನಮ್ಮ ಪ್ರಾಣ, ಬಾಬಾ ಸಾಹೇಬ್, ಶರಣಾಗಬೇಕೋ, ಎಂದು ಹಲವಾರು ಕವನದಲ್ಲಿ ಅವರ ಸತ್ಯದ, ಪ್ರಮಾಣಿಕತೆ ಕಾವ್ಯ ತೆರೆದಿಟ್ಟಿದ್ದಾರೆ. ಬಿ.ಬಸವಲಿಂಗಪ್ಪ, ಬಿ.ಕೃಷ್ಣಪ್ಪ. ನಾಲ್ವಡಿ, ಅಯೋಥಿ ದಾಸ್, ಸುಬ್ಬಣ್ಣ ಟಿ ಎಸ್, ಮಲ್ಲಿಕಾರ್ಜುನ ಖರ್ಗೆ, ಮಾರುತಿರಾವ ಮಾಲೆ ರಂತಹ ಅನೇಕ ಮಹನಿಯರ ಕುರಿತು ಇವರೆಲ್ಲರ ಸಂಘರ್ಷ ಜೀವನ ಹೋರಾಟ ಮಹತ್ವದ ಘಟ್ಟವನ್ನು ಕಾವ್ಯದಲ್ಲಿ ಹಿಡಿದಿಟ್ಟಿದ್ದಾರೆ. ಅವರ ಒಂದು ಕವನ ಇಡಿ ವ್ಯಕ್ತಿತ್ವ ಪರಿಚಯವಾಗುತ್ತ ಹೋಗುತ್ತದೆ. ಇಲ್ಲಿ ಕಲಾತ್ಮಕ, ಗೇಯತೆ, ಪ್ರಾಸ ಎಲ್ಲವೂ ಬಳಸಿಕೊಂಡು ಸಹಜವಾಗಿ ಮೂಡಿ ಬಂದಿರುವುದು ಗಮನಾರ್ಹ. ಪ್ರತಿಯೊಂದು ವ್ಯಕ್ತಿಗತ ಪದ್ಯಗಳು ಇವುಗಳ ಹೆಸರು ತೆಗೆದರು, ಅವರ ಸಾಧನೆ-ಕೃತಿಗಳು ಸಾಹಿತ್ಯದ ಹಲವು ವೈವಿಧ್ಯತೆಯನ್ನು ಪರಿಚಯಿಸುವುದಾಗಿದೆ.

ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಕುವೆಂಪು, ಬೇಂದ್ರೆ, ಕಾರಂತ, ಮಾಸ್ತಿ, ಗೋಕಾಕ, ಅನಂತಮೂರ್ತಿ, ಕಾರ್ನಾಡ, ಕಂಬಾರರು ಹಲವಾರು ಚೇತನಗಳನ್ನು ಇಲ್ಲಿ ಹೆಕ್ಕಿ ತೆಗೆದಿದ್ದಾರೆ. ನಿಸಾರ್, ಪಾಪು, ಶೆಟ್ಟರ್, ಕಣವಿ, ಎಚ್. ನರಸಿಂಹಯ್ಯ ಅವರ ಎಲ್ಲ ಕವನಗಳು ಅರ್ಥಗರ್ಭಿತವಾಗಿ ಮೂಡಿ ಬಂದಿವೆ.

***ಸಂಜೆ ಐದರ ಮಳೆಯಲಿ ನಮ್ಮೊಡನಿದ್ದು***

***ನಮ್ಮಂತಾಗದೆ ಗಾಂಧಿ ಬಜಾರದಲ್ಲಿ ಹುಡುಕಿ***

***ಬಾನೆತ್ತರಕೆ ಬದುಕು-ಬರಹ ಸುಂದರಗೊಳಿಸಿದ***

***ಅಗಣಿತ ಕವಿ ನಿತ್ಯೋತ್ಸವಕೆ ಮತ್ತೊಂದು ಹೆಸರು***

***ನಿಸಾರ್*** (ನಿಸಾರ್)

ಅವರ ವ್ಯಕ್ತಿತ್ವ ಒಡನಾಟದ ಚೇತನ ಇದರಲ್ಲಿದೆ. ಅದೇ ರೀತಿ ವೈದ್ಯ ಸಾಹಿತಿ ಸಂಘರ್ಷದ ಮೂಲಕ ಅಂತರಜಾತಿ ವಿವಾಹವಾಗಿ, ಸಾಹಿತ್ಯದ ಮೂಲಕ ಸಾಂಸ್ಕೃತಿಕ ಆಯಾಮ ನೀಡಿದವರು ಡಾ.ವಸುಂಧರಾ ಭೂಪತಿ ಅವರು.

***ಭೂಪತಿಯ ಒಡತಿ ಅಂತರ ಜಾತಿಗೆ ನಾಂದಿ ಹಾಡಿ***

***ಸಮಾಜದ ಸ್ವಾಸ್ಥ್ಯ ಕಾಪಾಡಿ ತುಂಬು ದಾಂಪತ್ಯ***

***ಜೀವನದಲಿ ತಂದೆ-ತಾಯಿ ಎರಡು ಆಗಿ ಮಕ್ಕಳು***

***ಕಾಪಾಡಿಕೊಂಡು ಬಂದ ಅನನ್ಯ ಪ್ರೀತಿ ಜೀವಿ (ಭೂಪತಿ)***

ಅದೇ ರೀತಿ ಸುನೀತಗಳನ್ನು ಬರೆದ ಸುಮಾರು ಎರಡುನೂರಕ್ಕು ಹೆಚ್ಚು ಕವಿತೆ ರಚಿಸಿದ್ದಾರೆ. ಅಭಿನಂದನ ಗ್ರಂಥಗಳಲ್ಲಿ ಸಂಭಾವನೆ ಗ್ರಂಥ, ಸಂಸ್ಮರಣ ಗ್ರಂಥ, ವ್ಯಕ್ತಿ-ಬರಹದಲ್ಲಿ ಅನೇಕ ಕವಿತೆಗಳನ್ನು ರಚಿಸಿದ್ದಾರೆ. ಅವುಗಳೇ ಇಂದು ಐದುನೂರಕ್ಕು ಹೆಚ್ಚು ವ್ಯಕ್ತಿಗಳ ಕವಿತೆ ಬರೆದಿದ್ದು ಇದೊಂದು ದಾಖಲಾರ್ಹವಾಗಿವೆ. ಸಾನೆಟ್, ಕವನ, ಚುಟುಕು, ಆಧುನಿಕ, ವಚನ, ಹಾಯಿಕು, ಗಜಲ್, ರುಬಾಯಿಗಳು ಕುರಿತು ಬರೆದ ಕವನಗಳಲ್ಲಿ ಸಹಿತ ವ್ಯಕ್ತಿ ಚಿತ್ರಣ ಮೂಡಿ ಬಂದಿವೆ. ಅವುಗನ್ನೆಲ್ಲ ಬರೆದು ಸಂಗ್ರಹಿಸಿದರೆ ಐದುನೂರು ಕವನಗಳು ವ್ಯಕ್ತಿಯ ಒಳನೋಟಗಳು ತೋರುತ್ತವೆ. ಸರಕಾರಿ ಪ್ರಥಮ ದರ್ಜೆ ಕಾಲೇಜು ಬಸವಕಲ್ಯಾಣದ ಸಿಬ್ಬಂದಿವರ್ಗದ ಉಪನ್ಯಾಸಕರು, ಕಾಲೇಜು ಶಿಕ್ಷಣ ಇಲಾಖೆ ಬೇರೆ ಬೇರೆ ಸಾಮಾನ್ಯರ ಕುರಿತು ಕವನ ಬರೆದು ದಾಖಲಿಸಿದ್ದಾರೆ. ಅಕ್ಕಮಹಾದೇವಿ, ಕ್ಷಿತಿಜ್, ಉರಿಲಿಂಗಪೆದ್ದಿ, ಕಾಳವ್ವೆ, ಅರಸು ಸಿದ್ಧರಾಮಯ್ಯ ಮುಂತಾದ ರಾಜಕಾರಣಿಗಳು, ಕನ್ನಡ ನಾಡು ನುಡಿ ಭಾಷೆಯ ಸಾಹಿತ್ಯ ಸಂಸ್ಕೃತಿ ಹಲವಾರು ಮಹತ್ವದ ಘಟನೆಗಳು ಅವರ ಕಾವ್ಯದಲ್ಲಿ ಹಿಡಿದಿದ್ದಾರೆ.

ಕಲ್ಯಾಣ ಕರ್ನಾಟಕ ಭಾಗದ ಅನೇಕ ಕವಿಗಳು, ಸಾಹಿತಿಗಳು, ವ್ಯಕ್ತಿಗಳ ಕುರಿತು ಕವನ ರಚಿಸಿದ್ದು ಸಾಂದರ್ಭಿಕವಾಗಿ ಒಡಮೂಡಿವೆ, ಕನ್ನಡ ನಾಡಿನ ಸಂಸ್ಕೃತಿ ಚಿಂತಕರು, ಪ್ರಾಧ್ಯಾಪಕರು, ನಿರ್ದೇಶಕರು ಶೋಷಿತ ಸಮುದಾಯದ ವೈಚಾರಿಕ ಚಿಂತಕರಾದ ಡಾ. ಎಚ್. ಟಿ. ಪೋತೆ ಅವರ ಕುರಿತು ಎರಡು ಕವನಗಳು ಭಿನ್ನವಾಗಿವೆ. ಮತ್ತು ಅವರ ಸಾಧನೆ–ಹೋರಾಟ ಜೀವನದಲ್ಲಿ ಹೀಗಿವೆ.

*ತಾಪಟ್ಟ ಕಷ್ಟ ನೋವುಗಳ ತನ್ನ ಜನಾಂಗ*

*ಯುವ ಪೀಳಿಗೆ ಅನುಭವಿಸಬಾರದೆಂದು ಎಷ್ಟೋಂದು*

*ಹಠ–ಜಗಳ ಮಧ್ಯ ಕಾನೂನು ಹಚ್ಚಿ ಸೀಟುಕೊಟ್ಟು*

*ವಿದ್ಯಾರ್ಥಿ ಸಮೂಹಕ್ಕೆ ಮಾಡಿದ ಕಾರ್ಯ ಅಭೂತ* (ಪೋತೆ–1)

*ಒರಟಾಗಿ ಕಂಡದ್ದು; ಮಾತು ಅದನರ್ಥ ತಿಳಿದಿಲ್ಲ ಜನ*

*ಖರ್ಗೆಯವರ ಪ್ರೀತಿಗೆ ಮಾಲೆ ಹಾಕುತ್ತಲೆ*

*ಒಂಟಿಸಲಗದಂತೆ ದುಡಿವ ದಲಿತ ಚಿಂತಕ* (ಪೋತೆ–2)

ಈ ರೀತಿ ಅವರ ಜೀವನ ಹೋರಾಟದ ಜೊತೆಗೆ ಹಲವಾರು ಚಿಂತನೆಗಳು ಕಟ್ಟಿಕೊಡುತ್ತವೆ. ಅವರ ವಸ್ತು, ಭಾಷೆ, ಶೈಲಿಗಳೆಂದು ಹಲವಾರು ಬಗೆಯ ವ್ಯಕ್ತಿತ್ವದ ವ್ಯಕ್ತಿಗಳ ಕಾವ್ಯಕಟ್ಟಿದ್ದು ಗಮನಾರ್ಹವಾಗಿದೆ.

ವ್ಯಕ್ತಿ–ವ್ಯಕ್ತಿತ್ವದ ಹಲವಾರು ಸಂಗತಿಗಳ ಹತ್ತಾರು ವಿಷಯಗಳ ಚಿಂತನೆಯ ಧಾರೆಗಳನ್ನು ಬಹು ಸೊಗಸಾಗಿ ತನ್ನವರ ಒಡಲಾಳದ ನೋವುಗಳನ್ನು ವ್ಯಕ್ತಿ ಚಿಂತನೆಯ ಹಲವಾರು ಒಳನೋಟಗಳನ್ನು ಕಾವ್ಯದ ಮೂಲಕ ಅಭಿವ್ಯಕ್ತಿಸಿದ್ದಾರೆ. ತನ್ನ ಕಾವ್ಯದ ಹಲವು ಒಳನೋಟ ಅಂತರಂಗ ಬಹಿರಂಗದ ಸೂಕ್ಷ್ಮತೆಗಳನ್ನು ಕಾವ್ಯದಲ್ಲಿ ಹೆಣೆದ ಡಾ. ಗವಿಸಿದ್ಧಪ್ಪ ಪಾಟೀಲರ ಕಾವ್ಯದ ವ್ಯಕ್ತಿ ಸಾಧಕರ ಚಿಂತನೆ ಹಚ್ಚುವ ಕವಿತೆಗಳಾಗಿವೆ.

**ಪರಾಮರ್ಶನ ಗ್ರಂಥಗಳು**


- ಭೀಮಶೇನ ಗಾಯಕವಾಡ. (2018). *ಸಮರಸ ಜೀವಿ.* ಸಿದ್ಧಲಿಂಗೇಶ್ವರ ಪ್ರಕಾಶನ.
- ಗವಿಸಿದ್ಧಪ್ಪ ಪಾಟೀಲ. (2019). *ಸಹಜ ಕಾವ್ಯ.* ವಿದ್ಯಾವಿಶಾರದ ಪ್ರಕಾಶನ.
- ಗವಿಸಿದ್ಧಪ್ಪ ಪಾಟೀಲ. (2009). *ಕನಸುಗಣ್ಣಿನ ಹುಡುಗಿ.* ಧರಿನಾಡು ಕನ್ನಡ ಸಂಘ, ಬಸವಕಲ್ಯಾಣ
- ಪಾಟೀಲ ಎಚ್.ಎಸ್. (2016). *ಕೊಪಣಸಿರಿ.* ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆ, ಗಂಗಾಸಿರಿ
- ಶರಣಪ್ಪ ಕವಡೆ. (2018). *ಗವಿಗಂಧ ಉರಿಲಿಂಗ ಪೆದ್ದಿ ಮಠ.* ಬೇಲೂರು.